ಇ) ಈ ಕೆಲಸಕ್ಕೆ ಟೆಂಡರುಗಳನ್ನು ಈಗಾಗಲೇ ಕರೆಯಲಾಗಿದೆ. ಮತ್ತು ಅವುಗಳನ್ನು ಪರಿಶೀಲಿಸಲಾಗುತ್ತಿದೆ. ಕರ್ನಾಟಕ ವಿದ್ಯುತ್ ನಿಗಮದ ನಿರ್ದೇಶಕ ಮಂಡಳಿಯ ಮತ್ತು ಭಾರತ ಸರ್ಕಾರದ ಒಪ್ಪಿಗೆ ದೊರೆತ ನಂತರ ಮಾರ್ಚ್ 1993ರ ವೇಳೆಗೆ ಉಪಕರಣಗಳ ಸರಬರಾಜಿಗೆ ಆದೇಶ ನೀಡಲು ಯೋಚಿಸಲಾಗಿದೆ. ಈಗಿನ ಪರಿಸ್ಥಿತಿಯ ಪ್ರಕಾರ ಈ ಘಟಕವನ್ನು 1994-95ರ ಅವಧಿಯಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ.

ಬಸವಕಲ್ಯಾಣ ತಾಲ್ಲೂಕಿನಲ್ಲಿ ಲೋಕೋಪಯೋಗಿ ರಸ್ತೆಗಳ ದುರಸ್ತಿ

824- ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಹೈದರಾಬಾದ್ ಕರ್ನಾಟಕ ಯೋಜನೆಯಡಿಯಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು?*

ಆ) *ಹುಲಸೂರು, ಬಸವಕಲ್ಯಾಣ, ಮುಡುಬಿರಸ್ತೆ, ಮಂದಾಳ್-ಸಲಗಾರ್ ರಸ್ತೆ, ಭಾಲ್ಕಿ- ಬಸವಕಲ್ಯಾಣ ಹಳ್ಳಿಯ ರಸ್ತೆಗಳ ನಿರ್ಮಾಣಕ್ಕಾಗಿ ವೆಚ್ಚವಾದ ಹಣವೆಷ್ಟು?*

ಇ) *ಈ ಕಾಮಗಾರಿ ಪೂರ್ಣಗೊಳ್ಳದೆ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಕೈಗೊಂಡ ಕ್ರಮವೇನು? ಈ ಕಾಮಗಾರಿಯನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಬಸವಕಲ್ಯಾಣದಲ್ಲಿ ಬಸವೇಶ್ವರ ಪ್ರತಿಮೆ ಸ್ಥಾಪನೆ.

826- ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಬಸವಕಲ್ಯಾಣದಲ್ಲಿ ಬಸವೇಶ್ವರ ಪ್ರತಿಮೆ ಸ್ಥಾಪಿಸಲು ಉದ್ದೇಶವಿದ್ದು ಈ ಗಾಗಲೇ ಜನರಿಂದ ರೂ. 3.00 ಲಕ್ಷಗಳನ್ನು ಸಂಗ್ರಹಿಸಲಾಗಿದ್ದು, ಇನ್ನು ರೂ. 3.00 ಲಕ್ಷಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ಪ್ರತಿಯಮೆಯ ಅನಾವರಣಕ್ಕಾಗಿ ಸರ್ಕಾರವು ಯಾವಾಗ ಸಹಾಯ ಧನ ನೀಡುವುದು.*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಶ್ವೇಶ್ವರಯ್ಯ ನಾಲಾ ಆಧುನೀಕರಣದ ಅಂದಾಜು ವೆಚ್ಚ

821 - ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ವಿಶ್ವೇಶ್ವರಯ್ಯ ನಾಲಾ ಆಧುನೀಕರಣಕ್ಕಾಗಿ ಸರ್ಕಾರವು ಕ್ರಮ ಕೈಗೊಂಡಿದೆಯೇ?*

ಆ) *ಹಾಗಿದ್ದಲ್ಲಿ ಈ ಯೋಜನೆಯ ಅಂದಾಜು ಮೌಲ್ಯವೆಷ್ಟು?*

ಇ) *ಈವರೆಗೆ ಸದರಿ ಆಧುನೀಕರಣ ಕಾಮಗಾರಿಗೆ ಎಷ್ಟು ವೆಚ್ಚವಾಗಿದೆ.?*

ಈ) *ಕಳೆದ ಮೂರು ವರ್ಷಗಳಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ.?*

ಉ) ಈ ಯೋಜನೆಯು ಈಗ ಯಾವ ಹಂತದಲ್ಲಿದೆ?

ಊ) ಆಧುನೀಕರಣ ಕಾಮಗಾರಿಗಳು ಪೂರ್ಣವಾದ ಮೇಲೆ, ಈಗ ತೊಂದರೆಗೊಳಗಾಗಿರುವ ಕೆರಗೋಡುನಾಲೆ, ಶಿಂಷನಾಲೆ, ಶಿಂಷಾ ಆಣೆಕಟ್ಟು, ನಾಲಾಪ್ರದೇಶ, ಮದ್ದೂರು ನಾಲೆ ಹಾಗೂ ಕಾವೇರಿ, ಹೆಬ್ಬಕವಾಡಿ ಮತ್ತು ತುರಗನೂರು ನಾಲೆಗಳಡಿಯಲ್ಲಿ ಬರುವ ಆಚ್ಚುಕಟ್ಟಿಗೆ ಸಂಪೂರ್ಣ ಹಾಗೂ ಸಮರ್ಪಕವಾಗಿ ನೀರು ಒದಗುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) ಈ ಯೋಜನೆಯ ಈಗಿನ ಅಂದಾಜು 92.000 ಕೋಟಿ ರೂ.ಗಳು

ಇ) 36.73 ಕೋಟಿ ರೂಪಾಯಿಗಳು. (ನವೆಂಬರ್ 92ರ ಅಂತ್ಯದವರೆಗೆ)

ಈ) 1989-90ನೇ ಸಾಲಿನಲ್ಲಿ ರೂ. 3.49 ಕೋಟಿಗಳು.
1990-91ನೇ ಸಾಲಿನಲ್ಲಿ ರೂ. 3.70 ಕೋಟಿಗಳು.
1991-92ನೇ ಸಾಲಿನಲ್ಲಿ ರೂ. 9.38 ಕೋಟಿಗಳು.

ಉ) ವಿ.ಸಿ. ನಾಲೆಯ ಮೊದಲನೇ ಸೆಕ್ಷನ್ ಕಾಮಗಾರಿಗಳು ಮತ್ತು ಸಂಪರ್ಕ ಕಾಲುವೆಯ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿದೆ.

ಊ) ಆಧುನೀಕರಣ ಕಾಮಗಾರಿಗಳು, ಪೂರ್ಣಗೊಂಡ ಮೇಲೆ ಕಾವೇರಿ, ಮದ್ದೂರು, ತುರುಗನೂರು, ನಿಡಘಟ್ಟ, ಹೆಬ್ಬಕವಾಡಿ, ಕೆರಗೋಡು ಪಿಕಪ್ ನಾಲೆಗಳ ಎಲ್ಲಾ ಆಚ್ಚುಕಟ್ಟು ಪ್ರದೇಶಕ್ಕೆ ನೀರು ಸರಬರಾಜನ್ನು ಸಮರ್ಪಕವಾಗಿ ಒದಗಿಸಬಹುದಾಗಿದೆ.

ಹೇಮಾವತಿ ಯೋಜನೆ ಎಡದಂಡೆ ನಾಲೆಯ ಕಾಮಗಾರಿ.

822 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ), ಶ್ರೀ ಎನ್. ತಮ್ಮಣ್ಣ (ಕೆರೆಗೋಡ್): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಯೋಜನೆ ಎಡದಂಡೆ ನಾಲೆಯ ಕಾಮಗಾರಿಯ ಅಂದಾಜು ಮೌಲ್ಯ ಎಷ್ಟು?

ಆ) ಎಡದಂಡೆ ನಾಲೆಯಿಂದ ಮಂಡ್ಯ ಜಿಲ್ಲೆಯ ಯಾವ ಯಾವ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ದೊರಕುತ್ತದೆ.

ಇ) ಎಡದಂಡೆ ನಾಲೆಯ ಕಾಮಗಾರಿಯು ಯಾವ ಹಂತದಲ್ಲಿದೆ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಹೇಮಾವತಿ ಯೋಜನೆಯ ಎಡದಂಡೆಯ ನಾಲೆಯ ಕಾಮಗಾರಿಯ ಅಂದಾಜು ಮೈಲ್ಯ 1992-93ನೇ ಸಾಲಿನ ದರಗಳ ಪ್ರಕಾರ 717.500 ಕೋಟಿಗಳು.

ಆ) ಹೇಮಾವತಿ ಯೋಜನೆಯ ಎಡದಂಡೆ ನಾಲೆಯಿಂದ ಮಂಡ್ಯ ಜಿಲ್ಲೆಯಲ್ಲಿ ಕೆ.ಆರ್. ಪೇಟೆ ತಾಲ್ಲೂಕು ಪಾಂಡವಪುರ ತಾಲ್ಲೂಕು, ನಾಗಮಂಗಲ ತಾಲ್ಲೂಕು ಹಾಗೂ ಮಂಡ್ಯ ತಾಲ್ಲೂಕಿನ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತದೆ.